**Karnataka Nursing & Para Medical Sciences Education(Regulation), Authority**
**Para Medical Baord**,
New No: 40/20A, Lakshmi Complex, First Floor, Opp. Vani Vilas Hospital, Fort,
Bengaluru-560002
**Contact No**: 080-26702159, 26705773, 26703922 Fax: 26705410

PMB/250/2020-21 Date: 22.02.2021

ಗೆ,
ನಿರ್ದೇಶಕರು/ಪ್ರಾಂಶುಪಾಲರು,
ಎಲ್ಲಾ ಸರ್ಕಾರಿ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳು
ಎಲ್ಲಾ ಖಾಸಗಿ ಅರೆ ವೈದ್ಯಕೀಯ ಕಾಲೇಜುಗಳು,
ಕರ್ನಾಟಕ

ಮಾನ್ಯರೆ,

ವಿಷಯ: ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಮಾಹಿತಿ ಸಲ್ಲಿಸುವ ಬಗ್ಗೆ.
ಉಲ್ಲೇಖ: ಎಸ್.ಎಸ್.ಪಿ ಪೋರ್ಟ್‌ಲ್ ವತಿಯಿಂದ ಬಂದ ಇ-ಮೇಲ್ ದಿನಾಂಕ: 17.02.2021.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಎಸ್.ಎಸ್.ಪಿ ವತಿಯಿಂದ ಮಾಹಿತಿ ಕೇಳಿರುತ್ತಾರೆ. ಕಳೆದ ಭಾರಿ ಕಾಲೇಜಿನ ಶುಲ್ಕದ ವಿವರ ಕಳುಹಿಸಿದ್ದು, ಈಗ ಎಸ್.ಎಸ್.ಪಿ ಪೋರ್ಟ್‌ಲ್‌ನಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳ (ದ್ವಿತೀಯ ಹಾಗೂ ತೃತೀಯ ವರ್ಷದ) ಸಂಪೂರ್ಣ ವಿವರವನ್ನು ಈ ಪತ್ರಕ್ಕೆ ಲಗತ್ತಿಸಿರುವ Excel Sheetನ ಮಾದರಿಯಲ್ಲಿ ದಿನಾಂಕ:25.02.2021 ರೊಳಗೆ ಮಂಡಳಿಯ ಇ-ಮೇಲ್ (pmbscholarship19@gmail.com) ಗೆ ಕಳುಹಿಸಲು ಈ ಪತ್ರದ ಮೂಲಕ ತಿಳಿಸಲಾಗಿದ್ದು ಹಾಗು ವಿವರ ಕಳುಹಿಸುವ ಸಮಯದಲ್ಲಿ ಒಂದು ವೇಳೆ ವಿದ್ಯಾರ್ಥಿಯ ಮಾಹಿತಿ ಬಿಟ್ಟು ಹೋಗಿದಲ್ಲಿ ಅಥವಾ ಮಾಹಿತಿ ತಪ್ಪಾಗಿದಲ್ಲಿ ಸಂಬಂಧಪಟ್ಟ ಕಾಲೇಜಿನವರೇ ಜವಾಬ್ದಾರರಾಗಿರುತ್ತಾರೆ.

ಮುಂದುವರೆದು, ತಮ್ಮ ಕಾಲೇಜಿನ ಲೇಟರ್‌ಹೆಡ್‌ನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಸಲ್ಲಿಸಿರುವ ಮಾಹಿತಿಯು ನೈಜವಾಗಿರುತ್ತದೆಂದು, ಇಲ್ಲವಾದಲ್ಲಿ ನಾವೇ ಜವಾಬ್ದಾರರಾಗಿರುತ್ತೇವೆ ಎಂದು ಬರೆದು ಪ್ರಾಂಶುಪಾಲರು ಸಹಿ ಮಾಡಿ ಮುಚ್ಚಳಿಗೆ ಪತ್ರ Excel Sheet ನ ಜೊತೆ ಸಲ್ಲಿಸುವಂತೆ ತಿಳಿಸಲಾಗಿದೆ.

ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಹೊಸ ಕಾಲೇಜುಗಳನ್ನು ನೊಂದಾಯಿಸಲು Aishe Code ಅವಶ್ಯಕತೆ ಇರುವುದರಿಂದ 2020-21ನೇ ಸಾಲಿಗೆ ಮಾನ್ಯತೆ ಪಡೆದಿರುವ ಹೊಸ ಕಾಲೇಜುಗಳ Aishe Code, ದೂರವಾಣಿ ಸಂಖ್ಯೆ ಹಾಗೂ ಕಾಲೇಜಿನ ಪೂರ್ಣ ವಿಳಾಸವನ್ನು pmbscholarship19@gmail.comಗೆ ಕೂಡಲೆ ಇ-ಮೇಲ್ ಕಳುಹಿಸಿಕೊಡಲು ಸೂಚಿಸಲಾಗಿದೆ.

ವಿಶೇಷಾಧಿಕಾರಿಗಳು
ಕರ್ನಾಟಕ ನರ್ಸಿಂಗ್ ಮತ್ತು ಅರೆ ವೈದ್ಯಕೀಯ
ವಿಜ್ಞಾನಗಳ ಶಿಕ್ಷಣ(ನಿಯಂತ್ರಣ) ಪ್ರಾಧಿಕಾರ,
ಬೆಂಗಳೂರು